| | | | |
|---|---|---|---|
| **17.82** ಲಕ್ಷ<br>ಸೈಬರ್ ಅಪರಾಧ ಕುರಿತು ದಾಖಲಾದ ದೂರಿನ ಸಂಖ್ಯೆ | **₹5,489** ಕೋಟಿ<br>ವಂಚನೆ ಆಗದಂತೆ ತಡೆದ ಮೊತ್ತ | **9.45** ಲಕ್ಷ<br>ವಂಚನೆಗೆ ಬಳಸಿದ್ದ, ದೂರಿನ ಬಳಿಕ ರದ್ದು ಮಾಡಲಾದ ಸಿಮ್ ಕಾರ್ಡ್‌ಗಳು | **2.63** ಲಕ್ಷ<br>ವಂಚನೆಗೆ ಬಳಸಿದ್ದ ದೂರಿನ ಬಳಿಕ ರದ್ದು ಮಾಡಲಾದ ಐಎಂಇಐ ಸಂಖ್ಯೆ |

ಆಧಾರ: 2025ರ ಆಗಸ್ಟ್ 6ರಂದು ಕೇಂದ್ರ ಗೃಹ ಸಚಿವಾಲಯವು ರಾಜ್ಯಸಭೆಗೆ ನೀಡಿದ ಉತ್ತರ

## ಜಗತ್ತಿನ 50ಕ್ಕೂ ಹೆಚ್ಚು ರಾಷ್ಟ್ರಗಳಿಗೆ ವ್ಯಾಪಿಸಿರುವ ಡಿಜಿಟಲ್ ಅರೆಸ್ಟ್

ಡಿಜಿಟಲ್ ಅರೆಸ್ಟ್ ಎನ್ನುವುದು ಭಾರತಕ್ಕೆ ಮಾತ್ರ ಸೀಮಿತವಾಗದೆ ಜಗತ್ತಿನ ಬಹುತೇಕ ರಾಷ್ಟ್ರಗಳನ್ನು ವ್ಯಾಪಿಸಿದೆ. ಆಯಾ ರಾಷ್ಟ್ರಗಳ ಅಧಿಕೃತ ಮೂಲಗಳ ಪ್ರಕಾರ, ನಕಲಿ ದಾಖಲೆ ಸೃಷ್ಟಿಸಿ 'ಅರೆಸ್ಟ್' ಮಾಡಿದಂಥ, ವಿಚಾರಣೆ ನಡೆಸಿದ ಪ್ರಕರಣಗಳು ಅಲ್ಲಲ್ಲಿ ವರದಿಯಾಗಿವೆ.

ಇನ್ನೂ ಕೆಲವೆಡೆ ವಿರೋಧಿಗಳನ್ನು ಹಣಿಯಲು ಇಂಥ ಡಿಜಿಟಲ್ ಕೃತ್ಯ ಎಸಗಿರುವ ಬಹಳಷ್ಟು ಉದಾಹರಣೆಗಳೂ ಇವೆ. ಏಷ್ಯಾ ಖಂಡದಲ್ಲಿ ಭಾರತ, ಚೀನಾ, ಪಾಕಿಸ್ತಾನ, ಆಫ್ಘಾನಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ, ನೇಪಾಳ, ಮ್ಯಾನ್ಮಾರ್, ವಿಯೆಟ್ನಾಂ, ಕಾಂಬೊಡಿಯಾ, ಥಾಯ್ಲೆಂಡ್, ಮಲೇಷ್ಯಾ, ಸಿಂಗಪುರದಲ್ಲೂ ಇಂಥ ಪ್ರಕರಣಗಳು ನಡೆದ ಉದಾರಣೆಗಳಿವೆ. ಆಫ್ರಿಕಾ, ಮಧ್ಯಪ್ರಾಚ್ಯ, ರಷ್ಯಾ, ಕ್ಯೂಬಾ, ವೆನೆಜುವೆಲಾ, ಸೈಬೀರಿಯಾ ಸೇರಿದಂತೆ ಜಗತ್ತಿನೆಲ್ಲೆಡೆ ಈ ಪಿಡುಗು ವ್ಯಾಪಿಸಿದೆ.

ಮುಂದುವರಿಯುತ್ತಿರುವುದು ವರದಿಯಾಗುತ್ತಲೇ ಇದೆ. ದೇಶದ ಗಡಿಯಾಚೆ ಕುಳಿತು ನಡೆಸುತ್ತಿರುವ ಈ ಸೈಬರ್ ಅಪರಾಧವನ್ನು ಹತ್ತಿಕ್ಕುವುದು ದೇಶದ ತನಿಖಾ ದಳದ ಎದುರಿರುವ ಈಗಿರುವ ಅತಿ ದೊಡ್ಡ ಸವಾಲು.

### ತಂತ್ರಜ್ಞಾನವೇ ಸವಾಲು: ನೆರವಾಗಲಿದೆಯೇ 'ನೇತ್ರಾ'

ಡಿಜಿಟಲ್ ಜಗತ್ತಿನಲ್ಲಿ ನಾಗರಿಕರ ಸುರಕ್ಷತೆಗಾಗಿ ಆವಿಷ್ಕಾರಗೊಳಿಸಲಾದ ಮುಖ ಚಹರೆ ಪತ್ತೆ, ಅಪಾಯವನ್ನು ಮೊದಲೇ ಪತ್ತೆ ಮಾಡಿ ತಿಳಿಸುವ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ಆಧಾರಿತ ಅಪರಾಧ ಟ್ರ್ಯಾಕಿಂಗ್ ಸೌಲಭ್ಯಗಳನ್ನೇ ವಂಚಕರು ಅನುಕರಿಸಿ ತಮ್ಮ ಲಾಭಕ್ಕೆ ಬಳಸಿಕೊಳ್ಳುತ್ತಿರುವುದೇ ವ್ಯವಸ್ಥೆಯ ವಿಡಂಬನೆಯಂತೆ ತೋರುತ್ತಿದೆ.

ಭಾರತದಲ್ಲಿ ಬಳಕೆಯಲ್ಲಿರುವ ನೆಟ್‌ವರ್ಕ್ ಟ್ರಾಫಿಕ್ ವಿಶ್ಲೇಷಣಾ ಯೋಜನೆಯಾದ **NETRA** ಎಂಬುದು ನೈಜ ಸಮಯದಲ್ಲಿ ಅಪಾಯವನ್ನು ಗುರುತಿಸಲು ಅಭಿವೃದ್ಧಿಪಡಿಸಲಾದ ಡಿಜಿಟಲ್ ವ್ಯವಸ್ಥೆಯಾಗಿದೆ. ಆದರೆ ಇಂಥದ್ದೊಂದು ಅಸ್ತ್ರ ಪೊಲೀಸ್ ವ್ಯವಸ್ಥೆಯಲ್ಲಿದೆ ಎಂಬುದರ ಮಾಹಿತಿ ಮತ್ತದರ ಪರಿಚಯವೇ ವಂಚಕರು ನೆಲದಡಿ ನುಸುಳುವಂತೆ ಮಾಡಿದೆ.

'ಡಿಜಿಟಲ್ ಅರೆಸ್ಟ್‌ಗೆ ಒಳಗಾದ ಯಾವುದೇ ವ್ಯಕ್ತಿಯು, 'ನೀವು ಎಐ ಕಣ್ಗಾವಲಿನಲ್ಲಿದ್ದೀರಿ' ಅಥವಾ 'ಲೈವ್ ಮಾನಿಟರ್‌ನಲ್ಲಿದ್ದೀರಿ' ಎಂದು ಕೇಳಿದರೆ ಸಾಕು, ಮುಂದೇನು ಮಾಡಬೇಕೆಂಬುದೇ ಅರ್ಥವಾಗುವುದಿಲ್ಲ. ನಿಜಕ್ಕೂ ಅಷ್ಟು ಗಂಟೆಗಳಲ್ಲಿ ಪ್ರತಿ ಅರ್ಧ ಗಂಟೆಗೊಮ್ಮೆಯಷ್ಟೇ ಮೇಲೇಳಲು ಅವಕಾಶ ನೀಡುತ್ತಾರೆ. ಅದೊಂದು ಹೇಳಲಾಗದ ಯಾತನೆ' ಎಂಬುದು ಇಂಥ ವಂಚನೆಗೆ ಒಳಗಾದ ಧಾರವಾಡದ ಹೆಸರು ಬಹಿರಂಗಪಡಿಸಲು ಒಪ್ಪದ ಹಿರಿಯರೊಬ್ಬರ ಅನುಭವದ ಮಾತು.

ಡಿಜಿಟಲ್ ಅರೆಸ್ಟ್‌ಗೆ ಒಳಗಾದ ವ್ಯಕ್ತಿಯು ತಾನು ಸೆರೆಮನೆಯಲ್ಲಿದ್ದ ಅನುಭವವನ್ನು ಹೊಂದುವ ಮೂಲಕ ಮಾನಸಿಕ ಆಘಾತಕ್ಕೆ ಒಳಗಾಗುವುದು ಇದರಿಂದ ಸೃಷ್ಟಿಯಾಗಿರುವ ಮತ್ತೊಂದು ಸಮಸ್ಯೆ. ಹಣಕಾಸಿನ ನಷ್ಟದ ಹೊರತಾಗಿಯೂ, ಅವಮಾನ ಮತ್ತು ಮಾನಸಿಕ ಖಿನ್ನತೆಗೆ ಇವರನ್ನು ಅತೀವವಾಗಿ ನೂಕುತ್ತಿದೆ. ಇಷ್ಟು ಮಾತ್ರವಲ್ಲ, ತಮ್ಮ ಬಳಿ ಇರುವ ಸಾಧನವೇ ನಮ್ಮನ್ನು ಇದಕ್ಕೆ ನೂಕಿದೆ ಎಂಬ ಶಾಶ್ವತ ಚಿಂತೆಗೂ ಇವರು ಒಳಗಾಗುತ್ತಾರೆ. ದೀರ್ಘ ಕಾಲದವರೆಗೆ ಡಿಜಿಟಲ್ ಅರೆಸ್ಟ್‌ಗೆ ಒಳಗಾದರೆ ಅವರು ಆ ಬಂಧನದ ಮನಸ್ಥಿತಿಯಿಂದ ಆಚೆ ಬರುವುದೇ ಕಷ್ಟವಾಗಬಹುದು ಎಂದೂ ಮನೋವಿಜ್ಞಾನಿಗಳು ಎಚ್ಚರಿಸಿದ್ದಾರೆ.

### ಡಿಜಿಟಲ್ ಅರೆಸ್ಟ್ ಕುರಿತು ಜಾಗೃತಿ

- 'ಭಯಪಡಬೇಡಿ, ಪಾವತಿಸುವ ಮುನ್ನ ಪರಿಶೀಲಿಸಿ' ಎಂಬ ಘೋಷವಾಕ್ಯದೊಂದಿಗೆ ಬ್ಯಾಂಕ್ ಹಾಗೂ ಇನ್ನಿತರ ಹಣಕಾಸು ಸಂಸ್ಥೆಗಳು ಜನಜಾಗೃತಿ ಮೂಡಿಸುತ್ತಿವೆ.
- ವಂಚಕರು ತೋರಿಸುವ ನಕಲಿ ಸರ್ಕಾರಿ ಆದೇಶಗಳನ್ನು ನಂಬುವ ಮೊದಲು, ಸರ್ಕಾರಿ ಪೋರ್ಟಲ್‌ಗಳ ಮೂಲಕವೇ ಅಧಿಕಾರಿಗಳ ಆದೇಶವನ್ನು ಪರಿಶೀಲಿಸಬೇಕು.
- 'ಡಿಜಿಟಲ್ ಬಂಧನ' ಎಂಬ ಪರಿಕಲ್ಪನೆಯೇ ಪೊಲೀಸ್ ವ್ಯವಸ್ಥೆಯಲ್ಲಿ ಇಲ್ಲ ಎಂಬುದನ್ನು ಅಧಿಕಾರಿಗಳು ಪದೇಪದೇ ಹೇಳುತ್ತಲೇ ಬಂದಿದ್ದಾರೆ. ಅದನ್ನು ಜನರು ಅರ್ಥ ಮಾಡಿಕೊಳ್ಳಬೇಕು.
- ಅಪರಿಚಿತ ವಿಡಿಯೊ ಕರೆಗಳನ್ನು ನಿರಾಕರಿಸುವುದು ಮತ್ತು ಸ್ವೀಕರಿಸದೇ ಇರುವುದು ಲೇಸು
- ಬಲವಂತದಲ್ಲಿ ಅಥವಾ ಒತ್ತಡದಲ್ಲಿ ಹಣ ವರ್ಗಾವಣೆಯನ್ನು ತಪ್ಪಿಸಬೇಕು
- **cybercrime.gov.in** ಅಂತರ್ಜಾಲ ತಾಣದಲ್ಲಿ ದೂರು ದಾಖಲಿಸುವ ಮೂಲಕವೂ ಇಂಥ ಕೃತ್ಯಗಳನ್ನು ತಡೆಗಟ್ಟಲು ಸಾಧ್ಯ.

'ಡಿಜಿಟಲ್ ಬಂಧನ' ಎಂಬುದು ತಂತ್ರಜ್ಞಾನ, ಮನೋವಿಜ್ಞಾನ ಮತ್ತು ಕಾನೂನು ವ್ಯಾಪ್ತಿಗೆ ಒಳಪಟ್ಟ ಅಪರಾಧ ಕೃತ್ಯ. ಇಲ್ಲಿ ಗ್ರಹಿಕೆಯನ್ನೇ ವಾಸ್ತವವೆಂದು ನಂಬಿಸುವ ವಂಚಕರು ಅದನ್ನೇ ಅಸ್ತ್ರವನ್ನಾಗಿ ಪ್ರಯೋಗಿಸುತ್ತಿದ್ದಾರೆ. ಇದಕ್ಕೆ ನಾಗರಿಕರಲ್ಲಿ ಡಿಜಿಟಲ್ ಜಾಗೃತಿ ಮೂಡಿಸುವುದರ ಜತೆಗೆ, ಪೊಲೀಸ್ ವ್ಯವಸ್ಥೆಯನ್ನೇ ಸ್ಮಾರ್ಟ್ ಮಾಡುವುದು ಅತ್ಯಗತ್ಯ ಎಂಬುದು ತಜ್ಞರ ಅಭಿಪ್ರಾಯ. ಡಿಜಿಟಲ್ ಅರೆಸ್ಟ್ ಎಂಬ ವಿಷಯದಲ್ಲಿ ಸದ್ಯ ನಡೆಯುತ್ತಿರುವುದು ಅಜ್ಞಾತ ಸ್ಥಳದಲ್ಲಿ ಅಡಗಿರುವ ವಂಚಕರು ಮತ್ತು ದೇಶದ ಪೊಲೀಸ್ ವ್ಯವಸ್ಥೆ ನಡುವಿನ ಯುದ್ಧ. ಇದನ್ನು ಎದುರಿಸುವ ಪ್ರಮುಖ ಅಸ್ತ್ರವೇ ಜಾಗೃತಿ.

